ಓ.ಎಸ್. ನಂಃ 26/2018
ಪಿ.ಡಬ್ಲ್ಯೂ-1 (ಬಸವರಾಜ)

ದಿನಾಂಕ: 19-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎಮ್.ಬಿ.ಎಚ್. ಪ್ರತಿವಾದಿ 1, 5 ಮತ್ತು 6 ಪರ ವಕೀಲರಿಂದಃ**

ಒಬ್ಬ ವ್ಯಕ್ತಿ ಮೃತಪಟ್ಟಾಗ ಆ ವ್ಯಕ್ತಿಯ ಕುಟುಂಬದವರು ಆ ವ್ಯಕ್ತಿಯ ವಾರಸುದಾರರೆಂದು ಹೇಳಿ ಪ್ರಮಾಣ ಪತ್ರ ಪಡೆಯಬೇಕಾದಲ್ಲಿ ಪ್ರಮಾಣ ಪತ್ರ ಕೊಡಬೇಕಾಗುತ್ತದೆ ಎಂದರೆ ಸರಿ. ನಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟ ಅಫಿಡವಿಟ್ ಪ್ರಕಾರ ನಿಪಿ-19 ಕೊಟ್ಟಿರುತ್ತಾರೆ ಎಂದರೆ ಸರಿ. ನಿಪಿ-19 ಕೊಡುವ ಪೂರ್ವದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಮೃತರ ಕುಟುಂಬದ ಸದಸ್ಯರುಗಳಿಗೆ ಯಾವುದೇ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಗ್ರಾಮ ಲೆಕ್ಕಾಧಿಕಾರಿಗಳು ವಿಚಾರಣೆ ಮಾಡುವಾಗ ಪಂಚರ ಹೇಳಿಕೆಯನ್ನು ಪಡೆದಿಲ್ಲ. ನಾವು ಗ್ರಾಮ ಲೆಕ್ಕಾಧಿಕಾರಿಗಳಿಗೆ ಕೊಟ್ಟ ಹೇಳಿಕೆ ಪ್ರಕಾರ ನಿಪಿ-19 ನಮಗೆ ಕೊಟ್ಟಿರುತ್ತಾರೆ ಎಂದರೆ ಸರಿ.

2. ಮೃತ 1ನೇ ಪ್ರತಿವಾದಿಗೆ ಮದುವೆ ಆಗಿರಲಿಲ್ಲ, ಆದರೂ ಸಹ ನಾವು ಸುಳ್ಳು ಅಫಿಡವಿಟನ್ನು ಕೊಟ್ಟು ನಿಪಿ-19 ನ್ನು ಪಡೆದಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಸೇರಿಕೊಂಡು ನಿಪಿ-19ನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಓ.ಎಸ್. ನಂಃ 26/2018
ಪಿ.ಡಬ್ಲ್ಯೂ-1 (ಬಸವರಾಜ)

**<u>ಪಾಟೀಸವಾಲುಃ ಶ್ರೀ.ಡಿ.ಬಿ.ಎ. ಪ್ರತಿವಾದಿ 2 ಮತ್ತು 7 ಪರ ವಕೀಲರಿಂದಃ</u>**

ಪ್ರತಿವಾದಿ 2 ಮತ್ತು 7 ಹಾಗೂ ಅವರ ವಕೀಲರು ಗೈರು ಹಾಜರಿ, ಆದ್ದರಿಂದ ಪಾಟೀಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀಸವಾಲುಃ ಶ್ರೀ.ಎಸ್.ಕೆ.ಎಚ್. 3ನೇ ಪ್ರತಿವಾದಿ ಪರ ವಕೀಲರಿಂದಃ</u>**

ಪ್ರತಿವಾದಿ 3 ಹಾಗೂ ಅವರ ವಕೀಲರು ಗೈರು ಹಾಜರಿ, ಆದ್ದರಿಂದ ಪಾಟೀಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ